ಹೇಳಿದೆ. ದಯವಿಟ್ಟು ಕ್ಷಮಿಸಬೇಕು. ಇದು ಸುಮಾರು ಮುನ್ನೂರು ವರ್ಷ ಹಳೆಯ ಕಾಲುವೆ. ಇದರ ಬಗ್ಗೆ ಏನು ಕೆಲಸ ಮಾಡಬೇಕಾಗಿದೆ ಮತ್ತು ಆ ಕೆಲಸದಲ್ಲಿ National Water Management Project ಅನ್ವಯ ವರ್ಲ್ಡ್ ಬ್ಯಾಂಕ್‌ಗೆ ಈ ಪ್ರಪೋಸಲ್ಸ್‌ನ್ನು ಕಳಿಸುತ್ತಿದ್ದೇವೆ. ಯೋಗ್ಯ ಸಮಯದಲ್ಲಿ ಪೂರ್ತಿ ಕೆಲಸ ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ಕೆಲಸಗಳಿಗೆ ಎಲ್.ಒ.ಸಿ. ಕೊಡುವಲ್ಲಿ ಸಹಿತ ತುಂಬಾ ತಾರತಮ್ಯ ಆಗುತ್ತಿದೆ. ತಾವು ಅದನ್ನು ಸರಿಪಡಿಸುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅದನ್ನು ನಾನು ನೋಡುತ್ತೇನೆ.

ಪ್ರಶ್ನೆ ಸಂಖ್ಯೆ : 2066 - ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮ ಅವರು ಹಾಜರಿರಲಿಲ್ಲ.

ತುಂಗಭದ್ರಾ ಎಡದಂತೆ ನಾಲೆಯ ದುರಸ್ತಿ

2071 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ 1983 ರಿಂದ 1991 ರವರೆಗೆ ಮಂಜೂರಾದ ಹಣವೆಷ್ಟು?

ಆ) ಎಷ್ಟು ಚೈನ್ ಕಾಮಗಾರಿಯನ್ನು 1983 ರಿಂದ 1991 ರವರೆಗೆ ಪೂರೈಸಲಾಗಿದೆ?

ಇ) ಇದಕ್ಕೆ ತಗಲಿದ ಹಣ ಎಷ್ಟು ಹಾಗೂ ಉಳಿದಿರುವ ಹಣವೆಷ್ಟು?

ಈ) ದುರಸ್ತಿ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ 1983 ರಿಂದ 1991 ರವರೆಗೆ ರೂ. 2,959.41 ಲಕ್ಷಗಳು ಮಂಜೂರಾಗಿರುತ್ತದೆ. ಒಳಮೈ ಭದ್ರಪಡಿಸುವ ಕೆಲಸಕ್ಕೆ ರೂ.1,986 ಲಕ್ಷ ಮಂಜೂರಾಗಿದೆ.

ಆ) ಅಗತ್ಯವಿದ್ದೆಡೆ ದುರಸ್ತಿ ಕೆಲಸಗಳನ್ನು ನಿರ್ವಹಿಸಲಾಗಿದೆ ಮತ್ತು ಒಳಮೈ ಭದ್ರಪಡಿಸುವ ಕೆಲಸವನ್ನು 2288 ಚೈನುಗಳಲ್ಲಿ ಪೂರೈಸಲಾಗಿದೆ.

ಇ) ದುರಸ್ತಿಗೆ ತಗಲಿರುವ ಹಣ 2,959.41 ಲಕ್ಷ ರೂ.ಗಳು ಮತ್ತು ಒಳಮೈ ಭದ್ರಪಡಿಸುವಿಕೆಗೆ ರೂ.1,986 ಲಕ್ಷ ರೂ.ಗಳು. ಹಣ ಉಳಿದಿಲ್ಲ.

ಈ) ಕ್ಲೋಸರ್ ಸಮಯದಲ್ಲಿ ಕೈಗೊಂಡಿದ್ದ ದುರಸ್ತಿ ಕಾರ್ಯವು ಮುಗಿದಿದೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಎಡದಂಡೆ ನಾಲೆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಅದು ಸುಮಾರು 25-30 ವರ್ಷಗಳಷ್ಟು ಹಿಂದೆ ಮಾಡಿರತಕ್ಕಂಥ ನಾಲೆ. ಅದರ ಒಳಮೈ ದುರಸ್ತಿಗೆ ಸರ್ಕಾರ ಈಗಾಗಲೇ, 29 ಕೋಟಿ ರೂಪಾಯಿ ಅಂದಾಜು ಖರ್ಚು ಮಾಡಿದ್ದಾರೆ. ಆದರೆ ಎಕ್ಸ್‌ಪರ್ಟ್ಸ್ ಕಮಿಟಿಯವರು 1989ರಲ್ಲಿ ಏನು ಆ ನಾಲೆಯ ದುರಸ್ತಿ ಕೆಲಸ ತೆಗೆದುಕೊಳ್ಳಬೇಕು ಎಂದು ನಿರ್ಣಯ ತೆಗೆದುಕೊಂಡ ಮೇಲೆ ಅದರಲ್ಲಿ ಕೆಲವು ಭಾಗಗಳನ್ನು ಬಿಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 150 ಚೈನ್ ಅಂದಾಜಿನ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಸರ್ಕಾರಕ್ಕೆ ಈ ಕೆಲಸ ತೆಗೆದುಕೊಳ್ಳುವ ಉದ್ದೇಶ ಇದೆಯೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರು ಒಂದು ಬೇಡಿಕೆಯನ್ನು ಏನು ಇಟ್ಟಿದ್ದಾರೆ, ಅದರ ಬಗ್ಗೆ ಕೂಡ ಪರಿಶೀಲನೆ ನಡೆದಿದೆ. ಉತ್ತರ ಬಂದಮೇಲೆ ಬೇಕಾದರೆ ಅವರಿಗೆ ಉತ್ತರವನ್ನು ಒದಗಿಸುತ್ತೇನೆ.

ಪಿರಿಯಾಪಟ್ಟಣ ತಾಲ್ಲೂಕಿನ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆ

2135 - ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆಯಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುವುದು ಹಾಗೂ ಇದಕ್ಕೆ ತಗಲುವ ಖರ್ಚೆಷ್ಟು;

ಆ) ಈ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಈ ಯೋಜನೆಗಾಗಿ ಇದುವರೆವಿಗೂ ಖರ್ಚಾದ ಮೊತ್ತವೆಷ್ಟು?

ಇ) ಈ ಯೋಜನೆ ಹಾರಂಗಿ ಯೋಜನೆಯಡಿಯಲ್ಲಿ ಸೇರಿದೆಯೆ?

ಈ) ಈ ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಗಾಗಿ ಎಷ್ಟು ಟಿ.ಎಂ.ಸಿ. ನೀರನ್ನು ಇಟ್ಟಿದೆ ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಅಚ್ಚುಕಟ್ಟು ಪ್ರದೇಶ 30,000 ಎಕರೆಗಳು ಅಂದಾಜು ವೆಚ್ಚ 19.60 ಕೋಟಿ ರೂ.ಗಳು (1985-86ರ ದರಗಳ ಪ್ರಕಾರ)

ಆ) ಈ ಯೋಜನೆಗೆ ಬೇಕಾಗುವ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ. ಇದುವರೆಗೂ ಮಾಡಲಾಗಿರುವ ವೆಚ್ಚ 30 ಲಕ್ಷ ರೂ.ಗಳು.

ಇ) ಸೇರಿದೆ.

ಈ) 5.82 ಟಿ.ಎಂ.ಸಿ. ಕಾಮಗಾರಿ ಪ್ರಾರಂಭಿಸಿದ ನಂತರ, ಹಣದ ಲಭ್ಯತೆಯನ್ನವಲಂಬಿಸಿ 3 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ನಾನು ಮತ್ತು ಶ್ರೀ ಕಾಳಮರಿಗೌಡ ಅವರು ಕೂಡಿ ಮೊನ್ನೆ ಅವರ ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದೇವೆ. ಅವರು ನಾನು ಕೂಡಿ ಆ ಸ್ಥಳವನ್ನು ಕೂಡ ನೋಡಿದ್ದೆವು. ಅದಷ್ಟು ಶೀಘ್ರ ಆ ಕಾರ್ಯವನ್ನು ಮುಗಿಸಿಕೊಡುತ್ತೇನೆ ಎಂದು ಭರವಸೆಯನ್ನು ಈಗಾಗಲೇ ನಾನು ಕೊಟ್ಟಿದ್ದೇನೆ. ಅದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ.ಎಸ್. ಕಾಳಮರಿಗೌಡ : ನಾವಿಬ್ಬರೂ ಪ್ರವಾಸ ಕೈಗೊಂಡಿದ್ದೆವು, ಅದಷ್ಟು ಬೇಗ ಮುಗಿಸಿಕೊಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಅಥವಾ ಎಷ್ಟು ತಿಂಗಳಲ್ಲಿ ಎಂಬ ಭರವಸೆ ಕೊಟ್ಟರೆ ಸಾಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮೂರು ವರ್ಷಗಳಲ್ಲಿ ಈ ಕೆಲಸವನ್ನು ಕಂಪ್ಲೀಟ್ ಆಗಿ ಮುಗಿಸುತ್ತೀರಾ? ಅದಕ್ಕಿಂತ ಮುಂಚೆ ಕೆ.ಇ.ಬಿ. ಯದ್ದು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ?